ದಿನಾಂಕಃ 14-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಜಿ ಬಿ ವಿ ವಕೀಲರಿಂದ

ನಿಪಿ-8 ಕೈ ಬರಹದ ಪಹಣಿ ಪತ್ರಿಕೆಯಲ್ಲಿ ಸರ್ವೆ ನಂ.9 ರಲ್ಲಿ ಎರಡು ಎಕರೆ ಮಾತ್ರ ಅಂತ ತೋರಿಸಿರುತ್ತಾರೆ ಎಂದರೆ ಸರಿ ಆ ಸರ್ವೆ ನಂಬರ್ ನ ಒಟ್ಟು ವಿಸ್ತೀರ್ಣ 430 ಎಕರೆ ಎಂದರೆ ಸಾಕ್ಷಿಯು ನನ್ನದು ಇರುವುದು ಎರಡು ಎಕರೆ ಮಾತ್ರ ಎಂದು ನುಡಿಯುತ್ತಾರೆ. ನಿಪಿ-8 ರಲ್ಲಿ ಮಾಲೀಕರ ಕಾಲಂ ಖಾಲಿ ಇದೆ ಯಾರ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿಯು ಏನೋ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ನಿಪಿ-8 ರಲ್ಲಿ ಕಬ್ಜೆ ಮತ್ತು ಸ್ವಾಧೀನದ ಕಾಲಂ ನಲ್ಲಿ ಯಾವ ರೀತಿ ಬಂದಿರುತ್ತದೆ ಅಂತ ಖಾಲಿ ಇದೆ ಎಂದರೆ ಸಾಕ್ಷಿಯು ಕಛೇರಿಯಲ್ಲಿ ಅವರು ನೀಡಿರುತ್ತಾರೆ ನಾನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-8 ರ ಸಾಗುವಳಿದಾರರ ಕಾಲಂ ನಲ್ಲಿ ನಿಮ್ಮ ಹೆಸರು ಇದೆ ಎಂದರೆ ಸರಿ. ನಿಪಿ-9 ಮತ್ತು ನಿಪಿ-10 ದಾಖಲೆಗಳಲ್ಲಿ ಕಂಪ್ಯೂಟರ್ ಕೃತ ಪಹಣಿಗಳಲ್ಲಿ ಸಾಗುವಳಿದಾರರ ಕಾಲಂ ನಲ್ಲಿ ನಿಮ್ಮ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿಯು ಖಾತೆ ಮಾಡಲು ಕೊಟ್ಟಿದ್ದು ಇನ್ನು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-8 ದಾಖಲೆಯು ನೀವು ಸೃಷ್ಟಿ ಮಾಡಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ. ನಿಪಿ-3 ದಾಖಲೆಯಲ್ಲಿ ಶಿರಸ್ತೇದಾರರ ಸಹಿ, ತಹಸೀಲ್ದಾರ್ ರವರ ಸಹಿ ಮತ್ತು ರೆವಿನ್ಯೂ ಇನ್ಸ್ ಪೆಕ್ಟರ್ ರವರ ಸಹಿಗಳು ಎಲ್ಲಾ ಒಂದೇ ಬರವಣಿಗೆಯಲ್ಲಿ ಇದೆ ಎಂದರೆ ಸಾಕ್ಷಿಯು ಅವರು ಕೊಟ್ಟಿರುತ್ತಾರೆ ನಾನು ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಮುಂದಿನ ಪುಟಗಳಲ್ಲಿ ಇರುವ ಬರವಣಿಗೆಯು ಬೇರೆ ಬೇರೆ ರೀತಿಯಲ್ಲಿ ಇದೆ ಎಂದರೆ ಅವರು ಕೊಟ್ಟಿರುತ್ತಾರೆ ನಾನು ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-3 ರ 9 ನೇ ಪುಟದಲ್ಲಿ ಅಭಿಪ್ರಾಯ ಬರೆದಿರುವುದಿಲ್ಲ ನೀವು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರತ್ಯೇಕವಾದ ಸ್ಕೆಚ್ ಅನ್ನು ಪಡೆದಿರುತ್ತೀರಾ ಎಂದರೆ ಇನ್ನೂ ಖಾತೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಮೊದಲು ಸ್ಕೆಚ್ ಆದ ನಂತರ ಖಾತೆ ಆಗುತ್ತದೆ ಎಂದರೆ ಸಾಕ್ಷಿಯು ಅದು ಹೇಗೆ

ಮಾಡುತ್ತಾರೋ ನನಗೆ ಗೊತ್ತಿರುವುದಿಲ್ಲ. ನಾನು ಖಾತೆ ಮಾಡಲು 4 ವರ್ಷದ ಹಿಂದೆ ಕೊಟ್ಟಿದ್ದು ಮಾಡಿರುವುದಿಲ್ಲ. ಈಗ ಕೊಟ್ಟು 3 ವರ್ಷ ಆಗಿರುತ್ತದೆ. ಯಾವ ಕಾರಣಕ್ಕಾಗಿ ನಿಮ್ಮ ಹೆಸರಿಗೆ ಖಾತೆ ಮಾಡಿಲ್ಲ ಎಂದರೆ ಖಾತೆ ಮಾಡುತ್ತೇನೆ ಅಂತ ಹೇಳಿ ಮಾಡಿರುವುದಿಲ್ಲ. ಖಾತೆ ಮಾಡಲುಅರ್ಜಿಯನ್ನು ಕೊಟ್ಟಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. 375 ರೂ ಕಟ್ಟಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೋ ಇಲ್ಲವೋ ಜ್ಞಾಪಕವಿಲ್ಲ ಎಂದು ನುಡಿಯುತ್ತಾರೆ. ನಿಪಿ-7 ರಲ್ಲಿ 100 ರೂಗಳನ್ನು ಎಕರೆಗೆ ಕಟ್ಟಿ ಅಂತ ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಎಕರೆಗೆ ಇಷ್ಟು ಹಣ ಕಟ್ಟಿ ಅಂತ ತಹಸೀಲ್ದಾರ್ ನಿಮಗೆ ನೋಟೀಸು ಕೊಟ್ಟಿದ್ದಾರ ಎಂದರೆ ನೆನಪಿರುವುದಿಲ್ಲ.

ರಾಮಚಂದ್ರಪ್ಪ ಮತ್ತು ಇತರ 7 ಜನರ ಮೇಲೆ ಪ್ರಕರಣ ದಾಖಲು ಮಾಡಿದ್ದು ಅದರಲ್ಲಿ ನೀವು 68 ವರ್ಷ ಅಂತ ಬರೆಸಿರುತ್ತೀರಿ ಎಂದರೆ ಸಾಕ್ಷಿಯು ಅವರೇ ಬರೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲೂ ನಿಮಗೆ 60 ವರ್ಷ ಅಂತ ಬರೆಸಿರುತ್ತೀರಿ ಎಂದರೆ ನೆನಪಿರುವುದಿಲ್ಲ. 1979-80 ರ ವರ್ಷಕ್ಕೆ ನಿಮಗೆ 16 ವರ್ಷ ಇರುತ್ತದೆ ಎಂದರೆ 20 ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ವಯಸ್ಸಿನಲ್ಲಿ ನನಗೆ ಮದುವೆಯಾಗಿರುವುದಿಲ್ಲ. ನಿಪಿ-4 ರಲ್ಲಿ ಹೆಂಡತಿ ಮತ್ತು ಮಕ್ಕಳ ಪೋಷಣೆಗಾಗಿ ಈ ಜಮೀನು ಮಂಜೂರುಮಾಡುತ್ತೇವೆ ಅಂತ ಬರೆದಿರುತ್ತದೆ ಎಂದರೆ ಸಾಕ್ಷಿಯು ಅದರಲ್ಲಿ ಏನು ಇದೆ ಅಂತ ನೆನಪಿರುವುದಿಲ್ಲ. ನನಗೆ 15-16 ವಯಸ್ಸು ಇದ್ದಾಗಿನಿಂದ ಈ ಜಮೀನು ಉಳುಮೆ ಮಾಡುತ್ತಿದ್ದೇನೆ. ನಿಪಿ-4 ರಲ್ಲಿ ಸುಮಾರು 15 ವರ್ಷಗಳ ಹಿಂದಿನಿಂದ ನಾನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದೇನೆ ಅಂತ ಬರೆದಿರುತ್ತದೆ ಎಂದರೆ ಸಾಕ್ಷಿಯು ನನ್ನ ಮಾವ ಉಳುಮೆ ಮಾಡುತ್ತಿದ್ದು ನಂತರ ನಾನು ಮಾಡುತ್ತಿರುತ್ತೇನೆ. ನಿಮ್ಮ ಮಾವ ಉಳುಮೆ ಮಾಡುತ್ತಿರುವ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿ . ನೀವು ದೂರಿನಲ್ಲಿ ಜಮೀನಿನಲ್ಲಿ ಕಲ್ಲು ತೆಗೆಯುತ್ತಿದ್ದು ಎಂದು ಹೇಳಿದ್ದು ನಿಮ್ಮ ಜಮೀನಿನಲ್ಲಿ ಕಲ್ಲು ಇದೆಯಾ ಎಂದರೆ ಇದೆ, ಸಾಕ್ಷಿಯು ನನ್ನ ಜಮೀನಿನಲ್ಲಿ ಇರುವುದಿಲ್ಲ ಅಕ್ಕ ಪಕ್ಕದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-3 ದಾಖಲೆಯ ಸ್ಕೆಚ್ ನಲ್ಲಿ ಸುತ್ತ ಮುತ್ತಲು ಎಲ್ಲಿಯೂ ಕಲ್ಲು ಇರುವುದನ್ನು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಕೊಟ್ಟಿರುತ್ತಾರೆ ನಾನು ತೆಗೆದುಕೊಂಡಿದ್ದೇನೆ ಎಂದು

ನುಡಿಯುತ್ತಾರೆ. ನಿಮ್ಮ ಜಮೀನು ಇರುವುದು ಬೋಡಗುಂಡ್ಲಹಳ್ಳಿ ಗೆ ಸೇರಿದ ಜಮೀನು ಎಂದರೆ ಸರಿ. ರಾಮಚಂದ್ರಪ್ಪನವರದ್ದು ಗೌನಿಚೆರವುಪಲ್ಲಿ ಗ್ರಾಮಕ್ಕೆ ಸೇರಿದ ಜಮೀನು ಎಂದರೆ ಸರಿ. ನೀವು ಯಾವುದೇ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಅಕ್ರಮವಾಗಿ ಜಮೀನನ್ನು ಕಬಳಿಸುವ ದೃಷ್ಟಿಯಿಂದ ಪ್ರತಿವಾದಿ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನಿಪಿ ನೀಡಿರುವ ನಿಪಿ-2 ರಿಂದ 8 ದಾಖಲೆಗಳು ತಾಲೂಾಕು ಕಛೇರಿಯಲ್ಲಿ ಲಭ್ಯ ಇಲ್ಲ ಎಂದರೆ ಸಾಕ್ಷಿಯು ಅವರೇ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅವೆಲ್ಲಾ ದಾಖಲೆಗಳನ್ನು ಸೃಷ್ಟಿಮಾಡಿಕೊಂಡಿರುವುದರಿಂದ ಆ ದಾಖಲೆಗಳು ತಾಲ್ಲೂಕು ಕಛೇರಿಯಲ್ಲಿ ಲಭ್ಯ ಇರುವುದಿಲ್ಲ ಎಂದರೆ ಸುಳ್ಳು ರಾಮಚಂದ್ರಪ್ಪನಿಗೆ ತಹಸೀಲ್ದಾರ್ ಕಛೇರಿಯಲ್ಲಿ ಈ ದಾಖಲೆಗಳು ಇಲ್ಲ ಅಂತ ಹೇಳಿ ಹಿಂಬಹರ ನೀಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ನೀವು ಹೇಳಿದ ದಿನಾಂಕಕ್ಕೆ ನಿಮಗೆ ವಯಸ್ಸು ಆಗಿರುವುದಿಲ್ಲ ಹಾಗೂ ಸರ್ಕಾರದಿಂದ ಯಾವುದೇ ಜಮೀನು ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ. ರಾಮಚಂದ್ರಪ್ಪ ರವರು ನಿಮ್ಮ ವಿರುದ್ದ ಅವರು ಜಮೀನಿನಲ್ಲಿ ಕೆಲಸ ಮಾಡವಾಗ ತೊಂದರೆ ಮಾಡುರುತ್ತೀರಿ ಅಂತ ದೂರು ದಾಖಲು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಜಮೀನಿನಲ್ಲಿ ಬಂದು ಅವರು ಗಲಾಟೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನೀವು ನೀಡಿರುವ ದಾಖಲೆಯಲ್ಲಿ ನಿಮಗೆ ಮರು ಮಂಜೂರಾದ ಬಗ್ಗೆ ಯಾವುದೇ ದಾಖಲೆ ಇರುವುದು ನನಗೆ ಗೊತ್ತಿರುವುದಿಲ್ಲ. ನೀವು ಯಾವುದೇ ಜಮೀನಿನಲ್ಲಿ ಸ್ವಾಧೀನದಲ್ಲಿ ಇಲ್ಲದೆ ಇರುವುದರಿಂದ ಪ್ರತಿವಾದಿಯರು ನಿಮ್ಮ ಸ್ವಾಧೀನಕ್ಕೆ ಅಡ್ಡಿ ಪಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಜಮೀನಿಗೆ ಬಂದು ನಮಗೆ ತೊಂದರೆ ನೀಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

PW1 present, defendant counsel fully cross examined.

For further plaintiff evidence.

Call on 30-08-2023.

**Prl. C. J. & JMFC,.**
**Chintamani**.